

ರಾಯನ ಕಾಲದ 'ಚಿತ್ತವಾಡಿಗಿ' ಕುರುಹು ಅಳಿಸಿಹೋಗಿ ಇಂದಿನ ಹೊಸಪೇಟೆ ಕಾಣಿಸುವುದು ಹೀಗೆ



ಆನೆಗೊಂದಿಯಲ್ಲಿನ ಕೃಷ್ಣದೇವರಾಯ ಪ್ರತಿಮೆ

ರಾಜ್ಯದ ಹೊಸ ಜಿಲ್ಲೆಯಾಗಿ 'ವಿಜಯನಗರ' ಘೋಷಣೆಯಾಗಿದೆ. ಹೊಸಪೇಟೆ ಜಿಲ್ಲೆಯ ಕೇಂದ್ರಸ್ಥಾನ. ವಿಜಯನಗರ ಸಾಮ್ರಾಜ್ಯ ಹುಟ್ಟಿದ್ದು ಆನೆಗುಂದಿಯಲ್ಲಿ. ಆನಂತರ ರಾಜ್ಯ ವಿಸ್ತಾರವಾಗುತ್ತಾ ಕಾಮಲಾಪುರ ಪ್ರಮುಖ ಕೇಂದ್ರವಾಯಿತು. 1509ರಲ್ಲಿ ಕೃಷ್ಣದೇವರಾಯ ಆಡಳಿತಕ್ಕೆ ಬಂದನಂತರ ರಾಜ್ಯ ವಿಸ್ತರಿಸುವ ಆತನ ಗಮನ ಹಂಪಿಯ ದಕ್ಷಿಣ ದಿಕ್ಕಿನತ್ತ ತಿರುಗಿತು. ಆಗ ಕಣ್ಣಿಗೆ ಬಿದ್ದುದೇ ಹೊಸಪಟ್ಟಣ ಅಥವಾ ಈಗಿನ ಹೊಸಪೇಟೆ. ಆ ವೇಳೆಗಾಗಲೇ ಅದು ಸಣ್ಣ ಹಳ್ಳಿಯಾಗಿ ಅಸ್ತಿತ್ವದಲ್ಲಿತ್ತು. ಅಲ್ಲಿನ ವಿಶಾಲ ಬಯಲು, ಹತ್ತಿರದಲ್ಲೇ ಹರಿಯುತ್ತಿದ್ದ ತುಂಗಭದ್ರಾ ನದಿ, ಸಮೃದ್ಧ ಫಸಲು ನೀಡುವ ಗದ್ದೆ ಮಾಗಾಣಿಗಳು ರಾಯನ ಗಮನಸೆಳೆದಿರಲೇಬೇಕು. ಹಾಗಾಗಿ ಆ ಹಳ್ಳಿಯನ್ನೇ ವಿಸ್ತರಿಸಿ ಪಟ್ಟಣ ನಿರ್ಮಿಸಿದ.

ರಾಯನ ಅವಧಿಯಲ್ಲಿ ಅದಕ್ಕೆ 'ತಿರುಮಲಾದೇವಿ ಪಟ್ಟಣ' ಎಂಬ ಹೆಸರಿತ್ತು. ಕೆಲವು ಶಾಸನಗಳಲ್ಲಿಯೂ ಹಾಗೆಯೇ ಇದೆ. ತಿರುಮಲಾದೇವಿಯು ರಾಯನ ಮೊದಲ ಪತ್ನಿ. ಆದರೆ ಜನಬಳಕೆಯಲ್ಲಿ ಹಾಗೂ ಪ್ರವಾಸಿಗರ ದಾಖಲೆಗಳಲ್ಲಿ 'ಹೊಸಪಟ್ಟಣ' ಎಂದೇ ಕರೆಯಲಾಗಿದೆ. ಆಗ ಇಲ್ಲಿ ಬಹುಸಂಖ್ಯೆಯ ವರ್ತಕರಿದ್ದರು. 1513ರ ಶಾಸನವೊಂದು ಮುದ್ಲಾಪುರವನ್ನು (ಈಗಿನ ಹೊಸಪೇಟೆ ರೈಲ್ವೇ ನಿಲ್ದಾಣದ ಬಳಿ ಇದೆ) ತಿರುಮಲದೇವಿಯರ ಪಟ್ಟಣದ ಮಾಗಣೆಗೆ ಸೇರಿಸಿ ಹಂಪೆಯ ಕೃಷ್ಣಸ್ವಾಮಿ ದೇವರಿಗೆ ಸಮರ್ಪಿಸಿದನೆಂದು ತಿಳಿಸುತ್ತದೆ. 1509ರಲ್ಲಿ ಪಟ್ಟಕ್ಕೆ ಬಂದ ರಾಯ 1513ರ ಹೊತ್ತಿಗೆ ಹೊಸಪಟ್ಟಣ ನಿರ್ಮಿಸಿದ್ದ.

1521ರ ಮತ್ತೊಂದು ಶಾಸನವು 'ತಿರುಮಲಾದೇವಿ ಪಟ್ಟಣದ ನಾಲ್ಕು ಬಾಗಿಲ ಬಳಿ ಕಾಶಿ ವಿಶ್ವೇಶ್ವರನ ಪ್ರತಿಷ್ಠಾಪನೆ ಕಾಲದಲ್ಲಿ ದೇವರ ಪೂಜೆ ನೈವೇದ್ಯಗಳಿಗಾಗಿ ಆ ಪಟ್ಟಣದ ಕೋಟೆಗೆ ಪಶ್ಚಿಮಕ್ಕೆ ಇದ್ದ ಯಲ್ಲಪ್ಪಣ್ಣನಕೆರೆಯನ್ನು ಧಾರೆಯೆರೆದು ಕೊಟ್ಟ' ಬಗ್ಗೆ ತಿಳಿಸುತ್ತದೆ. ಆದರೆ ಆ ಹೆಸರಿನ ಕೆರೆ ಈಗ ಹೊಸಪೇಟೆಯಲ್ಲಿ ಇಲ್ಲ. ಈಗಿನ ವಿಜಯನಗರ ಕಾಲೇಜಿನ ಹಿಂಭಾಗದ ಬಸವೇಶ್ವರ ಬಡಾವಣೆ ಹಾಗೂ ಇಂದಿರಾ ನಗರ ಇರುವಲ್ಲಿ ಹಿಂದೆ ಆ ಕೆರೆ ಇದ್ದಿರಬಹುದು ಎನ್ನುತ್ತಾರೆ ಇತಿಹಾಸಕಾರರು.

ರಾಯನಿಗೆ ಬಹುಪ್ರಿಯವಾದ ತಾಣ ಹೊಸಪಟ್ಟಣವಾಗಿತ್ತು ಎನ್ನುತ್ತಾರೆ ಆ ಕಾಲದ ವಿದೇಶೀ ಪ್ರವಾಸಿಗರು. ಯುದ್ಧಗಳಿಂದ ಹಿಂತಿರುಗಿದ ಕೂಡಲೇ ಆತ ವಿಶ್ರಾಂತಿಗಾಗಿ ಹೊಸಪಟ್ಟಣದ ಕಡೆಗೆ ಧಾವಿಸುತ್ತಿದ್ದ. ಪ್ರೀತಿಯ ಮಡದಿಯರು ಅಲ್ಲೇ ಇದ್ದುದರಿಂದ ಅದು ಸಹಜವೇ.

ಹೊಸಪಟ್ಟಣದಲ್ಲಿ ರಾಯ ಅಪರೂಪದ ರಚನೆಗಳನ್ನು ನಿರ್ಮಿಸಿದ್ದ. ಅಂಥ ಕೆಲವು ರಚನೆಗಳನ್ನು ನೆನಪಿಸಿಕೊಳ್ಳಬಹುದು.

## ಚಿತ್ರವಾಟಿಕಾ ಉದ್ಯಾನ

ತಿರುಮಲಾದೇವಿಯ ಮನೋಲ್ಲಾಸಕ್ಕಾಗಿ ಪಟ್ಟಣದಲ್ಲಿ 'ಚಿತ್ರವಾಟಿಕಾ' ಎಂಬ ಉದ್ಯಾನವನ ನಿರ್ಮಿಸಲಾಗಿತ್ತು. ಅಂದಿನ ಚಿತ್ರವಾಟಿಕವೇ ಇಂದಿನ ಚಿತ್ತವಾಡಿಗಿ. ಪಕ್ಕದಲ್ಲೇ ಹರಿಯುತ್ತಿರುವ ರಾಯ ಕಾಲುವೆ ಉದ್ಯಾನವನಕ್ಕೆ ನೀರಿನ